International Journal of Kannada Research 2018; 4(1): 67-70

International Journal of Kannada Research
www.kannadajournal.com

ISSN: 2454–5813
IJKR 2018; 4(1): 67-70
© 2018 IJKR
www.kannadajournal.com
Received: 12-11-2017
Accepted: 13-12-2017

**Laxmikant Hugar**
Research Scholar, Dr. R.C Hiremath Kannada Study Institute, Karnatak, University, Pavate Nagar, Dharwad, Karnataka, India

**Correspondence**
**Laxmikant Hugar**
Research Scholar, Dr. R.C Hiremath Kannada Study Institute, Karnatak, University, Pavate Nagar, Dharwad, Karnataka, India

# ಕನ್ನಡ ಬಂಡಾಯ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳ: ವಿವೇಚನೆ

**Laxmikant Hugar**

ಸಾವಿರ ವರ್ಷಗಳಿಗೂ ಮಿಕ್ಕಿ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ ಬಂಡಾಯ ಸಾಹಿತ್ಯ ಅತಿ ಮಹತ್ವದ ಚಾರಿತ್ರಿಕ ದಾಖಲೆಯಾಗಿದೆ. 'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಇದು ಬಂಡಾಯ ಸಾಹಿತ್ಯ ಸಂಘಟನೆಯ ಧ್ಯೇಯವಾಕ್ಯವಾಗಿದೆ. ಬಂಡಾಯವೆಂದರೆ ಸಾಮಾಜಿಕ, ರಾಜಕೀಯ, ಆರ್ಥಿಕ ವಲಯಗಳನ್ನೊಳಗೊಂಡು ಸಾಂಸ್ಕೃತಿಕ ವಲಯದ ಸ್ಥಿತ್ಯಂತರಗಳ ಆಶಯವುಳ್ಳ ಧೋರಣೆಯೇ ಬಂಡಾಯವಾಗಿದ್ದು ಇಂಥ ಬರಹವೇ ಬಂಡಾಯ ಸಾಹಿತ್ಯ.

ಅಧಿಕೃತವಾಗಿ ಬಂಡಾಯ ಸಾಹಿತ್ಯ ಸಂಘಟನೆ 1979 ಮಾರ್ಚ್ 10,11 ರಂದು ಹುಟ್ಟಿಕೊಂಡಿದ್ದರೂ ಆ ಎಪ್ಪತ್ತರ ದಶಕದುದ್ದಕ್ಕೂ ಬಂಡಾಯ ಮೊಳಕೆಯ ಪ್ರಕ್ರಿಯೆ ಸಂಘರ್ಷ ಮತ್ತು ಸಂಘಟನೆಯ ರೂಪದಲ್ಲಿ ನಾನಾ ನೆಲೆಗಳಲ್ಲಿ ಎಚ್ಚರಗೊಳ್ಳುತ್ತ, ಎಚ್ಚರಿಸುತ ಬಂದು ಸಂಘಟನೆಯ ರೂಪ ಪಡೆಯಿತು, ಜಾತಿವಿನಾಶ ವೇದಿಕೆ–ಬರಹಗಾರ ಕಲಾವಿದರ ಒಕ್ಕೂಟದ ಚಟುವಟಿಕೆಗಳು, ದಲಿತ ಸಂಘರ್ಷ ಸಮಿತಿಯ ಧರಣಿ–ಸತ್ಯಾಗ್ರಹಗಳು, ದಲಿತ ಕಲಾ ಮಂಡಳಿಯ ಹಾಡು–ಬೀದಿ ನಾಟಕಗಳು ಹೀಗೆ ಹೆಸರಿಸಬಹುದು. ಈ ಎಲ್ಲ ಒತ್ತಾಸೆಗಳ ಫಲವಾಗಿ ಪ್ರಗತಿಪರ ಮತ್ತು ಎಡಪಂಥಿಯ ವಿಚಾರವಾದಿಗಳ ಸಂಘಟನಾತ್ಮಕ ಒಗ್ಗೂಡುವಿಕೆಯೇ ಬಂಡಾಯ ಸಾಹಿತ್ಯ ಸಂಘಟನೆಗೆ ದಾರಿಯಾಯಿತು.

ಬಂಡಾಯ ಸಾಹಿತ್ಯವನ್ನು ಕುರಿತು ಜಿ.ಎಸ್. ಶಿವರುದ್ರಪ್ಪನವರು "ಶತಮಾನಗಳ ಕಾಲ ಅಕ್ಷರಜ್ಞಾನದ ಸವಲತ್ತುಗಳಿಂದ ವಂಚಿತನಾಗಿದ್ದು ಮತ್ತು ಮೇಲಿನ ಎಲ್ಲಾ ವರ್ಗದವರುಗಳಿಂದ ತುಳಿತಕ್ಕೆ ಒಳಗಾಗಿದ್ದ ಸಮಾಜದ ಕೆಳಗಿನ ಸ್ತರವೊಂದು ಮಾತನಾಡಲು ಕಲಿತು ತನ್ನ ಪ್ರತಿಭಟನೆಯನ್ನು ಅಭಿವ್ಯಕ್ತಿ ಪಡಿಸಿದಾಗಿ ಮೂಡಿಬಂದುದು ಬಂಡಾಯ ಸಾಹಿತ್ಯ" ಎನ್ನುತ್ತಾರೆ.[1] ಚಂದ್ರಶೇಖರ ಪಾಟೀಲರು ಬಂಡಾಯ ಸಾಹಿತ್ಯವನ್ನು ಕುರಿತು "ನಮ್ಮ ಸಮಕಾಲೀನ ಬದುಕಿನ ಅನೇಕ ವೈರುದ್ಯಗಳನ್ನು ವೈಷಮ್ಯಗಳನ್ನು ಇತಿಹಾಸದ ಚೌಕಟ್ಟಿನಲ್ಲಿ ಗುರುತಿಸಿ, ಸಮಾನತೆ ಹಾಗೂ ನ್ಯಾಯ (ಇಂಣಚಿಟುಣಥಿ & ಎಣಾಉಛಿಜ) ಗಳ ಮೌಲ್ಯಗಳನ್ನು ಆವರಿಸಿದ ಸಮಾಜವನ್ನು ಪುನಾರ್ರಚಿಸಲು ಸೂಕ್ಷ್ಮ ಸಂವೇದನೆಯ ಸಾಹಿತ್ಯವನ್ನು ಬಳಸಿಕೊಂಡಾಗ ಅದು ಬಂಡಾಯ ಸಾಹಿತ್ಯವಾಗುತ್ತದೆ ಎಂದು ಹೇಳುತ್ತಾರೆ."[2]

ಚರಿತ್ರೆಯ ಒತ್ತಡದಿಂದ ಸಂಘಟನನಾತ್ಮಕ ಸಾಮಾಜಿಕ, ಸಾಂಸ್ಕೃತಿಕ ಚಳುವಳಿಯ ಬಳುವಳಿಯಾಗಿ ಬಂದಿರುವ ಬಂಡಾಯ ಸಾಹಿತ್ಯಕ್ಕೆ ಸುಮಾರು ದಶಕಗಳ ಸೈದ್ಧಾಂತಿಕ ಚಳುವಳಿಯ ಗಟ್ಟಿತನವಿದೆ, ಬಂಡಾಯ ಸಾಹಿತ್ಯವಿಂದು ಕಾವ್ಯ ಕಥೆ, ಕಾದಂಬರಿ, ನಾಟಕ ಎಲ್ಲ ಪ್ರಕಾರಗಳಲ್ಲಿಯೂ ಸಮೃದ್ಧವಾಗಿ ಬೆಳೆದಿದೆ, ಹೀಗೆ ವಿಶಿಷ್ಟವಾಗಿ ಬೆಳೆದು ಬಂದಿರುವ ಸಾಹಿತ್ಯದಲ್ಲಿ 'ಸ್ತ್ರೀ ಬದುಕಿನ' ಬರವಣಿಗೆಯ ಆಶಯಗಳನ್ನು ಗುರುತಿಸುವ ಸಂದರ್ಭದಲ್ಲಿ ಬದಲಾವಣೆ ಎಂದರೆ ಏನು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ಈಗಿರುವ ವ್ಯವಸ್ಥೆಯ ಪಲ್ಲಟ ಮತ್ತು ಸಮಾಜೋ–ಆರ್ಥಿಕ ಸಮಾನತೆಯಿರುವ ಉಭಯ ಲಿಂಗಿ ಪ್ರಧಾನ ಮತ್ತು ಮನುಷ್ಯ ಮನುಷ್ಯನನ್ನು ಗೌರವಿಸುವ, ಪ್ರೀತಿಸುವ, ಆಧರಿಸುವ ಮೌಲ್ಯಗಳ ಸ್ಥಾಯಿತ್ವದ ಪರ್ಯಾಯ ಸಮಾಜ ವ್ಯವಸ್ಥೆಯನ್ನು ರಚಿಸುವುದು, ಕಟ್ಟುವುದು ಬಂಡಾಯ ಸಾಹಿತ್ಯ ಚಳುವಳಿಯ ಆಶಯವಾಗಿದೆ.

ಬಂಡಾಯ ಕಾದಂಬರಿಗಳಲ್ಲಿ ಬಂದಿರುವ ಅಸಹಾಯಕತೆ, ನೋವುಗಳು, ದೌರ್ಜನ್ಯ, ಪ್ರತಿಭಟನೆ, ಸ್ತ್ರೀಯರ ಸ್ಥಾನಮಾನದ ಹಿನ್ನೆಲೆಯಲ್ಲಿ ಸ್ತ್ರೀ ಬದುಕನ್ನು ಕುರಿತಂತೆ ಆಲೋಚನೆಗಳನ್ನು ನಡೆಸಿರುವುದನ್ನು ಈ ಕೆಳಕಂಡ ಪ್ರಾತಿನಿಧಿಕ ಬಂಡಾಯ ಕಾದಂಬರಿಗಳ ಹಿನ್ನೆಲೆಯಲ್ಲಿ ಕಾಣಬಹುದಾಗಿದೆ.

### 1. 'ಬೆಂಕಿ: ಬರಗೂರು ರಾಮಚಂದ್ರಪ್ಪ

ಬರಗೂರು ರಾಮಚಂದ್ರಪ್ಪನವರು 'ಬೆಂಕಿ' ಕಾದಂಬರಿಯ ನಾಯಕಿ ಲಕ್ಷ್ಮೀ ಬಡತನದ ಬೇಗೆಯಲ್ಲಿ

ಬೆಳೆದು ಬಂದವಳು. ತಂದೆ ಗಂಗಣ್ಣ ಗಂಡಸುತನ ವಿಲ್ಲವೆಂದು ಗೊತ್ತಿದ್ದರೂ ನರಸಿಂಹನಿಗೆ ಮದುವೆಮಾಡಿ ಮನೆಯಿಂದ ದೂರವಾಗುತ್ತಾನೆ, ಅವಳು ಮಾನಸಿಕ ವೇದನೆಯಿಂದ (ಕಾಮನೆಗಳ ಈಡೇರಿಕೆಯಿಲ್ಲದೆ) ವಿಲ ವಿಲ ಒದ್ದಾಡುತ್ತಾಳೆ. ಮೊದಲಿನಿಂದಲೂ ಅವಳ ಮೇಲೆ ಕಣ್ಣನ್ನು ಇಟ್ಟುಕೊಂಡಿದ್ದ ಸೀನಪ್ಪ ಗರಿಗೆದೆರಿದ ಹಕ್ಕಿಯಂತಾಗುತ್ತಾನೆ. ನರಸಿಂಹನಿಗೆ ಗಂಡುಸುತನವನ್ನು ಸರಿಪಡಿಸುವ ನೆಪದಲ್ಲಿ ಅವಳಿಗೆ ಬೇಲೂರು, ದೇವರಾಯ ದುರ್ಗಗಳನ್ನು ತೋರಿಸಿ ತನನ್ನು ಸೆಳೆಯುವಂತೆ ಮಾಡುತ್ತಾನೆ, ಆದರೆ ಅವಳು ಮನಸ್ಸು ಕೊಡುವದಿಲ್ಲ. ಇತ್ತ ದೇವರಾಯ ದುರ್ಗದಲ್ಲಿ ತಂದೆ ಗಂಗಣ್ಣ ಅಥವಾ ಗಂಗಾನಂದ ಸ್ವಾಮಿಯಾಗಿರುವುದನ್ನು ಕಂಡು ಪರಿತಪಿಸುತ್ತಾಳೆ. ನೀನು ಸ್ವಾಮಿಯಾಗಿರುವುದಕ್ಕಿಂತ ನನ್ನ ತಂದೆಯಾಗೆಂದು ಕೇಳಿಕೊಳ್ಳುತ್ತಾಳೆ. ಲಕ್ಷ್ಮೀ ದೇವರು, ಧರ್ಮಗಳ ಹೆಸರಿನಲ್ಲಿ ಬಂಡವಾಳ ಶಾಹಿಗಳ ಕಪಿಮುಷ್ಠೀಯಲ್ಲಿ ಸಿಕ್ಕಿ ತನ್ನತನವನ್ನೇ ಕಳೆದುಕೊಳ್ಳುತ್ತಾಳೆ, ಶೋಷಣೆಗೆ ಒಳಗಾಗುತ್ತಾಳೆ.

ತಂದೆ ಗಂಗಾನಂದ ಸ್ವಾಮಿಯಾಗಿ ಊರಿಗೆ ಬಂದಕೂಡಲೇ ಲಕ್ಷ್ಮೀ ಕಿಡಿಕಿಡಿಯಾಗುತ್ತಾಳೆ. ಸ್ವಾಮಿಯಲ್ಲಿಗೆ ಹೋಗಿ ಅವುಗಳು ಹೇಳುವುದು "ಹಂಗಾರೆ ನಾನು ಒಂದು ಮಾತ್ ಕೇಳ್ತೀನಿ ಅಪ್ಪ ಆಗಿದ್ದಾಗ ಗಂಡಸ್ತನ ಇಲ್ದೋನ್ಗೆ, ನನ್ನ ಕಟ್ಟಿದೆ ಹಿರೇರು ಹಾಕಿದ ದಾರಿ ಬಿಡಲ್ಲ ಅಂತ ತಾಳಿ ಬಿಗುಸ್ದೆ ಇವಾಗ್ಲೂ ಅವನಿಗೆ ಗಂಡಸ್ತನ ಬಂದಿಲ್ಲ ಈಗ ಹೇಂಗಿದ್ರೂ ಸ್ವಾಮಿ ನೀನು ಅವ್ನಿಗೆ ಗಂಡಸ್ತನ ಬರಿಸುಮಂತ್ರೆ"[3] ಎಂದು ಸವಾಲೆಸೆಯುತ್ತಾಳೆ. ಲಕ್ಷ್ಮೀ ತಂದೆಯಿಂದ, ಗಂಡನಿಂದ, ಸೀನಪ್ಪನಿಂದ, ಶೋಷಣೆಯನ್ನು ಅನುಭವಿಸಿ ಪ್ರತಿಭಟನೆಯನ್ನು ಮಾಡುತ್ತಾಳೆ, ಕೊರಳಲ್ಲಿದ್ದ ತಾಳಿಯನ್ನು ಹಿಡಿದುಕೊಂಡು ಕ್ಷಣಕಾಲ ದಿಟ್ಟಿಸಿದಳು, ಫಟ್ಟೆಂದು ಕಿತ್ತಳು ಚಾಡಿಸಿ ಎಸೆದಳು ಅದು ದೇವರ ಕಿರಿಟಕ್ಕೆ ತಗುಲಿದಾಗ ಊರಿಗೆ ಉರಿ ಬಿದ್ದಂಥ ಭಾವದಲ್ಲಿ ಬೆಚ್ಚಿಬಿದ್ದರು ಅಲ್ಲಿಯ ಜನ ಹೀಗೆ ಆಕೆಯ ಪ್ರತಿಭಟನೆಯ ಸ್ವರೂಪವನ್ನು ಬೆಂಕಿ ಕಾದಂಬರಿಯ ಹಿನ್ನೆಲೆಯಲ್ಲಿ ಮುಖ್ಯವೆನಿಸುತ್ತದೆ.

## 2. ಒಂದು ಊರಿನ ಕತೆ: ಬರಗೂರು ರಾಮಚಂದ್ರ

ಒಂದು ಊರಿನ ಕತೆ, ಕಾದಂಬರಿಯಲ್ಲಿ 'ಪುಟ್ಟಿ, ಕೆಂಚಿ' ಮತ್ತು 'ಗೌರಿಯ' ಪಾತ್ರಗಳನ್ನು ಕಾಣಬಹುದಾಗಿದೆ, ಪುಟ್ಟಿ ಭೈರಪ್ಪನ ಮಗಳು, ಊರಿನ ಕುಳ (ಗೇಣಿದಾರ) ಅವನು ರಾಮನಿಗೆ ಅವಳನ್ನು ಕೊಟ್ಟು ಮದುವೆ ಮಾಡಬೇಕೆಂದು ತಿರ್ಮಾನಿಸಿ ಅವನನ್ನು ಓದಿಸುತ್ತಾನೆ, ಆದರೆ ಅವನು ಅರ್ಧದಲ್ಲಿಯೆ ಓದನ್ನು ನಿಲ್ಲಿಸಿ ಊರಿಗೆ ವಾಪಾಸಾಗುತ್ತಾನೆ. ರಾಮನೊಂದಿಗೆ ಅವಳು ಸಲಿಗೆಯಿಂದ ಇದ್ದು ಹೊಸ ಹೊಸ ಕನಸನ್ನು ಕಾಣುತ್ತಿರುತ್ತಾಳೆ, ಆದರೆ ರಾಮ ಆಸೆಗೆ ವಿರುದ್ಧವಾಗಿ ನಡೆಯುತ್ತಾನೆ. ತನಗೆ ಗೆಳತಿಯಾದ ಕೆಂಚಿಗೆ ಬಯ್ಯುತ್ತಾನೆ ನಾಯಕರ ಹುಡಿಯೊಂದಿಗೆ ಕಬ್ಬಿನ ಗದ್ದೆಯಲ್ಲಿ ಇರುತ್ತಾನೆ, ಇದೆಲ್ಲವನ್ನು ನೋಡಿದ ಅವಳು ನಿರಾಸೆಗೊಂಡು ಹೇಳುವುದು ಹೀಗೆ "ಬರಾಕಿಲ್ಲ, ಯಾರ್ ಕರದ್ರು ಬರಾಕಿಲ್ಲ ನಾನವ್ನನ ಮದ್ವೆ ಆಗಾಕಿಲ್ಲ"[4] ಎನ್ನುತ್ತಾಳೆ.

ಕೆಂಚಿಯು ಕೂಡ ಸಮಾಜದ ದೃಷ್ಟಿಯಲ್ಲಿ ನಿಕೃಷ್ಟಳಾಗಿ ಹೋಗುತ್ತಾಳೆ ಗಂಗಿ ಹಳ್ಳದಲ್ಲಿ ನೀರು ಮುಟ್ಟಿದಳು ಎಂಬ ಕಾರಣಕ್ಕಾಗಿ ಊರಿನ ನ್ಯಾಯಮೂರ್ತಿಗಳಾದ ಜ್ಯೋಯಿಸರು, ಬಸವಯ್ಯನವರು, ಪಟೇಲ ತಿಮ್ಮೇಗೌಡರು ಕಂಬಕ್ಕೆ ಕಟ್ಟಿ ಹೊಡೆಯುತ್ತಾರೆ. ಮೂರು ತಿಂಗಳ ಗರ್ಭಿಣಿಯಾಗಿದ್ದ ಅವಳು ಮರದಿನವೇ ಸಾವನಪ್ಪುತ್ತಾಳೆ, ಅವಳ ಗಂಡನಾದ ಸಿದ್ದಣ್ಣನು ಕೂಡ ಅವಳ ಪ್ರಾಣವನ್ನು ಕಾಪಾಡುವಲ್ಲಿ ಅಸಹಾಯನಾಗುತ್ತಾನೆ. ಕೆಂಚಿಯ ಅಸಹಾಯಕತೆ ಎದ್ದು ಕಾಣುತ್ತದೆ. ಕೆಂಚಿಯ ದೀನ ಸ್ಥಿತಿಯ ಕಂಡು "ಏನಾಗೈತೆ ಆಗ್ಬಾರದ್ದು? ಯಾರ್ಗೂ ಕಾಣ್ದಂಗೆ ಎಷ್ಟಾಗಕಿಲ್ಲ ಈ ಊರ್ನಾಗೆ? ಪಾಪ! ಅವಳು ಬ್ಯಾರೆ ಬಸುರಿ ಆಗೆವ್ಳೆ"[5] ಎಂದು ಪುಟ್ಟಿ ಹೇಳುವುದನ್ನು ನೋಡಿದಾಗ ತನ್ನ ಜನಾಂಗದ ಮೇಲೆ ಅನ್ನುವುದಕ್ಕಿಂತ ಪುರುಷ ಪ್ರಧಾನ ವ್ಯವಸ್ಥೆಯನ್ನೇ ಧಿಕ್ಕರಿಸುವಂತೆ ಕಂಡುಬರುತ್ತದೆ. ಸ್ತ್ರೀ ಸಮುದಾಯಕ್ಕೆ ಆಗುವ ನೋವು ಇದು ಎಂದು ಚಡಪಡಿಸುತ್ತಾಳೆ.

## 3. ಕಪ್ಪು: ಕುಂ. ವೀರಭದ್ರಪ್ಪ

ಕಪ್ಪು ಕಾದಂಬರಿಯಲ್ಲಿ ನಾಯಕಿ ಗೌರಿ ಅಸಹಾಯಕ ಸ್ಥಿತಿಯನ್ನು ಅನುಭವಿಸುತ್ತಾಳೆ. ಅತ್ತ ತಂದೆ–ತಾಯಿಯೊಂದಿಗೆ ಸುಖವಾಗಿ ಇರಲಾರದೆ ಇತ್ತ ಬದಕಲೂ ಆಗಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. 'ಗೌರಿ' ಅಂದುಕೊಳ್ಳುವುದು ಹೀಗೆ: "ತಾನು ಚಂದ ಇರಬಾರದಿತ್ತು, ಅಂದುಕೊಂಡಳು ಕಣ್ಣುಗಳ ನೀರು ಸುರಿಸದಷ್ಟು ಖಾಲಿಯಾಗಿದ್ದವು, ಬದುಕಿಗೆ ಹೋದಾಗಲೆಲ್ಲ ಗಂಡಸರ ಕಣ್ಣುಗಳು ತನ್ನ ಮೈಯನ್ನು ಉಣ್ಣುತ್ತಿದ್ದದನ್ನು ನೆನಪಿಸಿಕೊಂಡು ಬೆಚ್ಚಗಾದಳು"[6] ಗೌರಿಯನ್ನು ಸೆಳೆಯಲು ಸಣ್ರುದ್ರ ಪ್ರಯತ್ನಿಸಿದಾಗ ಅವಳು ಬೇಡ ಅಣ್ಣನಿಗೆ ಗೊತ್ತಾದ್ರೆ ಸುಮ್ನೆ ಬಿಡುವುದಿಲ್ಲ ಎಂದಳು ಅದಕ್ಕೆ ಸಣ್ರುದ್ರ ಹೇಳುವ ಮಾತಿದು: "ಎಂಗೂ ನಂಗೆ ಮದ್ವೆ ಆಗಿಲ್ಲ.......... ಯಾವ್ದಾರ ಹುಡುಗಿ ಪಸಂದನಿಸಿದ್ರೆ ಮದ್ವೆ ಆಗೋನಂತ ಮಾಡಿದ್ದೆ..... ಎಂಗೋ ನೀನಿದ್ದಯಲ್ಲಾ...... ನಿನ್ನ ಮದ್ವಿ ಆಕ್ತೀನಿ ಎದ್ರುಬ್ಯಾಡ" ಎಂದು ಅವಳ ಹೆಣ್ತನವನ್ನು ಲೂಟಿ ಮಾಡಿದ.[7]

ಕುರುಬರ ಗಂಗಿಯನ್ನು ಕರಿಗೌಡ ಇಟ್ಟುಕೊಂಡಿದ್ದ ಆದರೆ ಅವಳು ತಿಮ್ಮನೊಂದಿಗೆ ಕಳ್ಳ ಅನೈತಿಕ ಸಂಬಂಧವಿಟ್ಟುಕೊಂಡಿದ್ದಳು ಇದು ಕರಿಗೌಡನಿಗೆ ಗೊತ್ತಾದ ಮೇಲೆ ಪರಸುನನ್ನು ಕರೆದು ಹೀಗಿಗೆ ಎಂದು ತಿಳಿಸಿದ, ಪರಸು ಕುರುಬರ ಗಂಗಿಗೆ ಮಾಡಿದ ಹಿಂಸೆ ಹೀಗಿತ್ತು "ಮೈತುಂಬ ಕಂಬಳಿ ಹೊದ್ದುಕೊಂಡು ಪರಸು ಊರೊಳಗೆ ಸಪ್ಪಳವಾಗದಂತೆ ಸೇರಿ ಮನೆ ಮುಂದೆ ಒರಸಿನ ಮ್ಯಾಲೆ ಅಂಗಾತ ಮಲಗಿದ್ದ ಗಂಗಿಯ ಬಾಯಿ ಮುಚ್ಚಿ ಹೊತ್ತುಕೊಂಡು ಊರ ಹೊರಕ್ಕೆ ಒಯ್ದು ಆಕೆಯ ಮೂಗು, ಮೊಲೆಗಳ ತುದಿ ಮತ್ತು ನಾಲಿಗೆ ತುದಿ ಕೊಯ್ದು ಹೋಗಿದ್ದ"[8]

ಗೌರಿಯನ್ನು ಬಸವಿ ಮಾಡಲು ಕುಂಕಮ ಬಂಡಾರವನ್ನೆಲ್ಲ ಹಚ್ಚಿದಾಗ ಅವಳು ಬೇಡ ಬೇಡವೆಂದು ಅಳುತ್ತಾಳೆ. ಹೆಂಗಸೊಬ್ಬಳು ಗೌರಿಯ ಸ್ಥಿತಿಯನ್ನು ಕಂಡು ಧ್ವನಿಗೂಡಿಸುವುದು ಹೀಗೆ: "ಎಣ್ಣಾಗಿ ಉಟ್ಟಿದ ಮ್ಯಾಗೆ ಇಂಥಾದ್ನೆಲ್ಲ ಅನುಭೋಗಿಸಬೇಕು ಮಗಳೆ"[9] ಗೌರಿಯನ್ನು ಕುರಿತು ಪಂಡನಗೌಡ ಹೇಳುವ ಮಾತುಗಳಿವು "ಅವಳನ್ನು ಹಿಡಿದೆತ್ತಿ ಇನ್ನೂ ಅಳೋದು ಕಡಿಮೆ ಮಾಡಿಲ್ಲೇನು...... ಉಚ್ಚಿ......... ನಿನ್ನಂಥ ಸುಂದರಿರ್ನ ಆ ದ್ಯಾವ್ರು ನಮ್ಮಂಥ ಗೌಡ್ರೀಗೆ ಒಪ್ಪಿಸಿರೋದು ...... ನಮ್ಮಥೋರ ಮಗ್ಲು ಮಲಗೋದು ನಿನ್ನಂಥ ಕಾಟಿಗ ಎಂಗಸರ ಪುಣ್ಯ"[10] ಎನ್ನುತ್ತಾನೆ.

ಮಾರಮ್ಮನ ಜಾತ್ರೆಯಲ್ಲಿ ನಡೆದ ಮಾರಮಾರಿಯಲ್ಲಿ ಸುಣ್ರುದ್ರ ಹಾಗೂ ಕರೀಗೌಡನ ಗುಂಪಿನವರು ಸಂಪೂರ್ಣವಾಗಿ ನಾಶವಾಗುತ್ತಾರೆ. ಗೌರಿ ಉಳಿದುಕೊಳ್ಳುತ್ತಾಳೆ, ಆದರೆ ಅವಳು ಬಸವಿ ಎಂದು ಆಗಲೇ ಎಲ್ಲರು ಹಣೆ ಪಟ್ಟಿಯನ್ನು ಕಟ್ಟಿರುತ್ತಾರೆ. ಐದಾರು ಮಂದಿ ಒಕ್ಕೊರಲಿನಿಂದ ಹೇಳುವ ಮಾತಿದು: "ನೀನು ಬಸವಿ...... ನೀನು ಗಂಡಸರನ್ನು ಸುಧಾರ್ಸೋದು ನಿನ್ನ ಧರ್ಮ ಆ ಬ್ರೆಮ್ಮ ಬರೆದಾನೆ ನಿನ್ನ ಹಣೇ ಮ್ಯಾಗೆ, ನೀನು ಬಸವಿಯಾಗಿ ಇರ್ಬೇಕಂತೆ.[11] ಅವಮಾನ ತಡೆಯಲಾರದೆ ಗೌರಿ ತೆಗೆದುಕೊಂಡ ನಿರ್ಧಾರ ಹೀಗಿತ್ತು: "ಕಣ್ಣೀರು ಮಣ್ಣು ಎನ್ನನ್ನು ಒರೆಸಿಕೊಳ್ಳದೆ ಮನೆಗೆ ಮರಳಿದ್ದಳು, ಮನೆಯೊಂದಿಗೆ ಸೇರಿ ಬಾಗಿಲು ಮುಚ್ಚಿಕೊಂಡಳು ಮತ್ತೆ ಬಾಗಿಲು ತೆರೆಯಲಿಲ್ಲ".[12]

### 4. ಹುಲಿಗೆಮ್ಮ: ಚೆನ್ನಣ್ಣ ವಾಲೀಕಾರ

'ಹುಲಿಗೆಮ್ಮ' ಕಾದಂಬರಿಯಲ್ಲಿ ಹೆಣ್ಣಿನ ಅಸಹಾಯಕತೆ, ಶೋಷಣೆ ದಾಖಲಾಗಿರುವುದನ್ನು ನೋಡಬಹುದಾಗಿದೆ. ಕಳೆದ ರಾತ್ರಿ ಮಳೆ ಬಂದುದರಿಂದ ಹುಲಿಗೆಮ್ಮಳ ಗುಡಿಸಲು ಸಂಪೂರ್ಣವಾಗಿ ತೊಯ್ದಿತ್ತು. ಅವಳ ಸ್ತ್ರೀ ಸಹಜ ಸ್ಥಿತಿಯನ್ನು ಈ ರೀತಿ ಸೆರೆ ಹಿಡಿಯುತ್ತಿದ್ದಾರೆ "ಬೇಗ ಬೇಗ ಹೆಜ್ಜೆ ಇಡುತ್ತ ಮುಂದೆ ಬಂದಾಗ ನಾನು ಬೆಳಗಾನ ಊಹಿಸಿದಂತೆ ಹುಲಿಗೆಮ್ಮನ ಗುಡಿಸಿಸ್ಥಿತಿ ಆಗಿತ್ತು. ತಗಡಾಗಳು ಹಾರಿ ಹೋಗಿದ್ದವು, ಗುಡಿಸಿ ತುಂಬ ನೀರು ನಿಂತಿದ್ದವು. ಒಬ್ಬ ಹೆಣ್ಣು ಮಗಳು ಕಚ್ಚೆ ಹಾಕಿಕೊಂಡು ಮೈಕೈಯೆಲ್ಲ ಮಣ್ಣು ಮಾಡಿಕೊಂಡು ಗುಡಿಸಿ ಸರಿಪಡಿಸುತ್ತಿರುವುದು ಕಂಡು ಬಂತು, ಸಂಪೂರ್ಣ ಆ ಹೆಣ್ಣುಮಗಳು ಮಣ್ಣಿಣ್ತಾಗಿದ್ದಳು, ಅದು ಅವಳೇ ಆಗಿದ್ದಳು[13]

ಸಿದ್ದಾರೆಡ್ಡಿ ಹುಲಿಗೆಮ್ಮನನ್ನು ಹಿಡಿದುಕೊಂಡಾಗ ಅವಳ ಮಾನಸಿಕ ಸ್ಥಿತಿ ಹದಗೆಟ್ಟು ಅವಳು ಅವನಲ್ಲಿ ಹೇಳುವುದು ಹೀಗೆ: "ಸಾವ್ಕಾರ ನಿನ್ನ ಕಾಲ ಬೀಳ್ತಿನಿ, ನನಗೆ ಬಿಟ್ಟುಬಿಡು ನಾ ನಿನಗೇನು ಕೆಟ್ಟದ್ದ ಮಾಡೀನಿ? ಹಿಂಗ ನನ್‌ನ್ಯಾಕ ಇಲ್ಲಿಗಿ ತಂದೀರಿ"[14] ತನ್ನ ಬದುಕು ಎಲ್ಲಾ ರೀತಿಯಿಂದು, ಹಾಳಾದುದನ್ನು ನೆನೆದು ಅಂದುಕೊಳ್ಳುವುದು ಹೀಗೆ: "ಥೂ ಈ ರೂಪಕ್ಕೆ ಬೆಂಕಿ ಹಾಕ, ಹುಟ್ಟಿದೂರನ್ನು ಮರೆಸಿತು ಗಂಡನ ಮನೆಯನ್ನು ಬಿಡಿಸಿತು, ಶಾಮರಾಯ ಸಾಹುಕಾರನ ಜೀವ ತಗೋತು ಅವನ ಜೊತೆ ರಾಮಣ್ಣನದು, ಆಳುಗಳದು ಜೀವ ಹೋಯಿತು. ಈಗ ಇಷ್ಟು ಜೀಂವಾ ಹೋದವು ಇನ್ನೆಷ್ಟು ಜೀವ ಹೋಗುತ್ತಾವೋ ಎನ ಸುದ್ಯೋ ಕೊಡಾಗೆ ನರಸಪ್ಪ ಕಾಕಾ ಚಲೊ ಗಂಡಗ ನೋಡಿಕೊಡಲಿಲ್ಲ. ಆಯ್ತು ನನ್ನದೀಗ ತೂತ ಬಿದ್ದ ದೋಣಿಯಾಯಿತು. ಎಲ್ಲಿ ತೆಲುತೀನೋ ಎಲ್ಲಿ ಮುಳಗತೀನೋ ಸಟಗಿ ಬಾಯಾಗ ಮಣ್ಣ ಹಾಕಹೀಂಗ ಆಗಬೇಕಂತ ಬರೆದಿದ್ದಳೇನಂತೀನಿ ರಂಡಿ[15]

ಹುಲಿಗೆಮ್ಮ ಕಳ್ಯಾನೊಂದಿಗೆ ಒಳ್ಳೆಯ ಬಾಳುವೆಯನ್ನು ಮಾಡುತ್ತಿದ್ದಳು. ಇದನ್ನು ಸಹಿಸದ ಧರೆಪ್ಪಗೌಡ ತನ್ನ ಆಳುಗಳನ್ನು ಬಿಟ್ಟು ಕಳ್ಯಾನನ್ನು ಕೊಲ್ಲಿಸುತ್ತಾನೆ. ಆಗ ಹುಲಿಗೆಮ್ಮ ತನ್ನ ದುಃಖವನ್ನು ತೋಡಿಕೊಳ್ಳುವುದು ಹೀಗೆ "ದಿನಮಾನ ಯಾರ ಸಲ್ಯಾಕ ಚಾಲೂ ಮಾಡಿಕೊಳ್ಳತಿ ಎವ್ವಾ ನನ್ನ ರಾಜಾ ಹೋದಾಗ ನಾಯಾರ ಸಲ್ಯಾಕ ಇರಲೆ ತಾಯಿ ನೀವೀಗ, ಏನಂದರೂ ನನ್ನೆದಿಗಿ ಹತ್ತಿದ ಉರಿ ಯಾರು ಆರಸತಾರೆ ತಾಯಿ"[16] ಎಂದು ವ್ಯಥೆಪಡುತ್ತಾಳೆ.

### 5. ಮರಣಮಂಡಲ ಮಧ್ಯದೊಳಗೆ : ಮುಳ್ಳೂರು ನಾಗರಾಜ

ಮುಳ್ಳೂರು ನಾಗರಾಜರವರ ಮರಣಮಂಡಲ ಮಧ್ಯದೊಳಗೆ 'ಕಾದಂಬರಿಯಲ್ಲಿ ಮಾಳಗಮ್ಮ, ಹೋಲಾರಸಿದ್ಧಿ ಮತ್ತು ರಂಗಿ ಎಂಬ ಸ್ತ್ರೀ ಪಾತ್ರಗಳನ್ನು ಕಾಣಬಹುದಾಗಿದೆ. ಮಾಳಗಮ್ಮ ಸಂಗಯ್ಯನಿಂದ ಆಕರ್ಷಿತಳಾಗಿ ಅವನಿಂದ ಗರ್ಭಿಣಿಯಾಗುತ್ತಾಳೆ, ಗೆಳತಿಯಾದ ಹೋಲಾರ ಸಿದ್ಧಿ ಮಾಳಗಮ್ಮನ, ಸಂತೋಷವನ್ನು ಕಂಡು ಸಹಿಸಲಾರದೆ ರಾಕ್ಷಸಿ ಸಂಗಯ್ಯನನ್ನು ಕೊಲೆ ಮಾಡಿಸುತ್ತಾಳೆ. ಸಂಗಯ್ಯನನ್ನು ಕೂಡಲು ಹೋದಾಗ ಅವನು ನಿರಾಕಸಿದ್ದೆ ಅವನ ಸಾವಿಗೆ ಕಾರಣ. ಇಲ್ಲಿ ಮಾಳಿಯ ಮುಗ್ಧತೆ ಒಳ್ಳೆಯತನ ಪ್ರಕಟವಾದರೆ ಮತ್ತೊಂದೆಡೆ ಹೆಣ್ಣಿನಿಂದ ಹೆಣ್ಣಿನ ಶೋಷಣೆಯಾಗುವುದನ್ನು ಗುರುತಿಸಬಹುದು.

ಹೊಲ್ಯಾರ ಸಿದ್ಧಿಯದು ಇನ್ನೊಂದು ಬಗೆಯ ಶೋಷಣೆಯಾಗಿದೆ, ಕೂಲಿನಾಲಿ ಮಾಡಿ ಬದುಕುತ್ತಿದ್ದ ಆಕೆಯನ್ನು ಊರಗೌಡರ ಮಗ ಇಟ್ಟುಕೊಳ್ಳುತ್ತಾನೆ, ಮಗನು ಮಾಡಿದ ಈ ವಿಷಯ ಗೌಡನಿಗೆ ಗೊತ್ತಾಗಿ ಅವನು ಕೆಂಡಕಾರುತ್ತಾನೆ. ಅವನ ಮಾತಿದು: "ಹೆಂಗ್ಸು ಯಾವ ಜಾತಿಯವಳಾದ್ರು ಆಗಿರ್ಲಿ ಅವಳ ಇಟ್ಕಳಕ ಮಾಡಕ ಯಾವ ಸೂತಕವು ಇಲ್ಲ. ಎಷ್ಟಾದ್ರು ಮೂರ್ಕಾಸುನೆಂಗ್ಸಲ್ವ? ಆದ್ರ ತಾಳಿ ಕಟ್ಟೇಕಾರ ಜೊತೆಲಿ ಬದುಕ್ಬೇಕಾರ ಅವಳು ನಮ್ಮ ನಮ್ಮ ಜಾತಿಯೊಳ್ಗೇ ಆಗಿರಬೇಕು"[17] ಎಂಬ ನಿಲುವು ತಾಳುತ್ತಾನೆ. ಇಲ್ಲಿ ಹೆಣ್ಣು ಎಂದರೆ ಒಂದು ಭೋಗದ ವಸ್ತು ಎನ್ನುವುದನ್ನು ಧ್ವನಿಸುತ್ತದೆ, ಕೀಳು ಜಾತಿಯವಳಾಗಲಿ, ಮೇಲುಜಾತಿಯವಳಾಗಿರಲಿ ಅವಳಿಗೂ ಒಂದು ಜೀವವಿದೆ ಎನ್ನುವುದನ್ನು ಗಣಿಸುವುದಿಲ್ಲ ಕೊನೆಗೂ ಸಿದ್ಧಿಯೂ ಹಾಗೇ ಉಳಿಯುವುದು ವ್ಯವಸ್ಥೆಯು ಎಷ್ಟು ಕಠೋರವಾದದು ಎಂಬುದನ್ನು ಕಾದಂಬರಿ ಪರಿಚಯಿಸುವುದು.

ಜಾತಿ –ಜಾತಿಗಳಲ್ಲಿಯೇ ಹೆಣ್ಣನ್ನು ಯಾವ ರೀತಿ ಶೋಷಣೆಮಾಡುತ್ತಾರೆ ಎಂಬುದಕ್ಕೆ ರಂಗಿಯ ಪ್ರಸಂಗ ಉತ್ತಮ ನಿದರ್ಶವಾಗಿದೆ. ರಂಗ ರಂಗಿಯನ್ನು ಮದುವೆಯಾಗುತ್ತೇನೆಂದು ನಂಬಿಸಿ ಅವಳನ್ನು ಚೆನ್ನಾಗಿ ಭೋಗಿಸುತ್ತಾನೆ. ರಂಗಿಯನ್ನು ಮದುವೆ ಮಾಡಿಕೊಳ್ಳಲು ಬಂದ ಸಂಬಂಧವನ್ನು ಚಾಡಿಹೇಳಿ ತಪ್ಪಿಸುತ್ತಾನೆ, ರಂಗನ ಮಾತಿನಲ್ಲಿಯೆ ಇದನ್ನು ಸ್ಪಷ್ಟಪಡಿಸಬಹುದು. "ನೀವು ನೋಡಿರಾ ಕಾಡುರೆಣ್ಣ ನಾನು ಮಡ್ಕಂದಿನಿ ಮೂರು ನಾಕು ವರುಷದಿಂದ ನನಗೂ ಅವಳಿಗೂ ನಂಟು ಅವಳೊಟ ಒಳಗನಿಂದ ಒಂದು ಎಡಾಕೂಸ್ಗಳ ಈಚ್ಗ ತಗಿಸಿದ್ದೀನಿ ಇಷ್ಟರ ಮೇಲೆ ನಿಮ್ಮಿಷ್ಟ"[18] ಎಂದು ಪತ್ರ ಬರೆಯುವುದರೊಂದಿಗೆ ಅವರನ್ನು ತಪ್ಪಿಸುತ್ತಾನೆ ಹೀಗೆ ರಂಗಿಯು ಮಾಳಗಮ್ಮ ಮತ್ತು ಹೊಲಾರ ಸಿದ್ಧಿಯವರಿಂಗಿತ ತೀರ ಭಿನ್ನವಾದ ಶೋಷಣೆಯನ್ನು ಅನುಭವಿಸುತ್ತಾಳೆ.

### 6. ಮಾಗಿ: ಮ. ನ. ಜವರಯ್ಯ

ಮ.ನ.ಜ ಅವರ 'ಮಾಗಿ' ಕಾದಂಬರಿ ದಲಿತ ಹೆಣ್ಣೊಬ್ಬಳನ್ನು ಕೇಂದ್ರವಾಗಿಟ್ಟುಕೊಂಡು ರಚಿಸಿದ ಕಾರಣವಾಗಿ ವಿಶಿಷ್ಟವಾಗಿದೆ, ಗಿರಿಯಪ್ಪನ ಕುಡುಕತನ ಹುಂಬುತನದಿಂದ ಬದುಕು ಹೀಗೆ ನಾಶವಾಗುತ್ತದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ. ಗಿರಿಯಪ್ಪ ಕುಡಿದು ಬಂದು ಹೆಂಡತಿಯೊಂದಿಗೆ ವರ್ತಿಸುವ ರೀತಿ ತುಂಬ ಅಮಾನವೀಯವಾದುದು. ದಲಿತರಲ್ಲಿ ಎದ್ದು ಕಾಣುವ ಅವರ ಈ ಮಿತಿಯನ್ನು ಇಲ್ಲಿ ಸ್ಪಷ್ಟಪಡಿಸಬಹುದಾಗಿದೆ "ಏ ಚಂಬೇಲಿ ರಂಡೆ! ನಿಜಾಯೋಳು, ಇಲ್ದಿದ್ರೆ ನಿನ್ನ ಕುರಿ ಕೊದಂಗೆ ಕೂದಾಕ್ ಬಿಡ್ತನಿ, ಮೂರ್ ದಿನದಿಂದ ಯಾವನೊಂದಿಗೆ ಹೋಗಿದ್ದೆ? ಮಾತಾಡು! ಕೆಡಿಕಂಡು ನಸುಗೂನೀಕಾಯ್ ತಿಕ್ಕಬಿಡ್ತಿನಿ, ಅದಿದ್ರ ತಾನೇ ನೀನು ಯಾವನೊಂದಿಗಾರೇವೋಗಬೈದು, ಅದೇ ಕ್ವಳತೋದ್ರೆ, ನೀನುಂಗೋದೆ? ಯೇಳು, ನಿಜಾಯೇಳು! ನಿನ್ನ ಅಂವನ್ ತಾಂವ್‌ಕೇ ಕಳೀಸ್ ಬಿಡ್ತಿನ್"[19] ಎನ್ನುತ್ತಾನೆ. ಮಾಗಿ ಅನೇಕ ಕಷ್ಟನಷ್ಟಗಳ ನಡುವೆ, ಸೋಲು–ಗೆಲುವುಗಳ ನಡುವೆ ಜೀವ ನದಿಯಾಗಿ ಹರಿಯುತ್ತ ಬದುಕಿನ ಮಹತ್ವವನ್ನು ಸಾರಿ ಹೇಳುತ್ತ ಮಾನವೀಯತೆಯ ಸಂಕೇತವಾಗುತ್ತಾಳೆ.

ಡಾ. ಬಸವರಾಜ ಸಬರದವರು ಮಾಗಿ ಕಾದಂಬರಿಯನ್ನು ಕುರಿತು "ಮಾಗಿ" ಕಾದಂಬರಿಯಲ್ಲಿ ಪ್ರತಿಭಟನೆಯಿಲ್ಲ ಬದುಕಿನ ತೀವ್ರ ಹೋರಾಟವಿದೆ. ಪರಿಸರದ ಕಾರ್ಯವನ್ನೆಲ್ಲ ಅರಗಿಸಿಕೊಂಡು ಗಂಡ, ಭಾವ, ಮೈದುನರು, ಅತ್ತಿಗೆ ನಾದಿನಿಯರು, ಹೋರಾಟದಲ್ಲಿ ಹುಟ್ಟಿದ ಮಕ್ಕಳು ಇವರೆಲ್ಲರು ಕೊಡುವ ಕಷ್ಟಗಳನ್ನು ಸಹಿಸಿಕೊಂಡು ದಿಟ್ಟತನದಿಂದ ಬದುಕುವ ಮಾಗಿಯ ಪಾತ್ರ ವಿಶಿಷ್ಟವಾಗಿದೆ. ಮಾಗಿ ಇಲ್ಲಿ ಭೂಮಿಕೆಯಿಯಂತೆ ಕೇವಲ ಸಹನಮೂರ್ತಿಯಲ್ಲ. ಎಲ್ಲ ಎಡರು–ತೊಡರುಗಳನ್ನು ಎದುರಿಸಿ ಬದುಕಲೇಬೇಕೆಂಬ ಹಟತೊಟ್ಟವಳು ಈ ಎಲ್ಲ ನೋವಿನ ನಡುವೆಯೂ ಬದುಕು ಎಷ್ಟು ಮುಖ್ಯ ಎಂಬ ಸಂಗತಿಯನ್ನು 'ಮಾಗಿ ಸಾಧಿಸಿತೋರಿಸಿದ್ದಾಳೆ'. ಹೀಗಾಗಿ ಮಾಗಿ ಇಲ್ಲಿ ಸಹನೆ–ತ್ಯಾಗದ ಸಂಕೇತವಾಗುತ್ತಲೇ ಬದುಕಿನ ಅದಮ್ಯ ಚೇತನವಾಗುತ್ತಾಳೆ"[20] ಎಂಬುದು ಮಾಗಿ ಪಾತ್ರಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಹೀಗೆ ಪ್ರಾತಿನಿಧಿಕ ಬಂಡಾಯ ಕಾದಂಬರಿಗಳಲ್ಲಿ ಅಂದಿನ ಸಾಮಾಜಿಕ ಆರ್ಥಿಕ, ಧಾರ್ಮಿಕ ಸ್ಥಿತಿಗತಿಯಲ್ಲಿ ಹೆಚ್ಚಿನ ಮೇಲಾಗುವ ಪುರುಷ ದೌಜನ್ಯ ಮತ್ತು ಅನ್ಯಾಯಗಳನ್ನು ಕಾದಂಬರಿಗಳಲ್ಲಿ ಸ್ಪಷ್ಟ ಚಿತ್ರಣ ಕಂಡುಬರುವುದು.

**ಅಡಿಟಿಪ್ಪಣಿ:**


1. ಶಿವರುದ್ರಪ್ಪ ಜಿ.ಎಸ್. ಬಂಡಾಯ ಸಾಹಿತ್ಯ ಕುರಿತು ಪುಟ–15, ಅನ್ವೇಷಣೆ 1985
2. ಪಾಟೀಲ ಚಂದ್ರಶೇಖರ ಬಂಡಾಯ ಸಾಹಿತ್ಯ ವಿಶೇಷಾಂಕ ಸಂಕ್ರಮಣ ಪುಟ35.1987–88
3. ಬರಗೂರು ರಾಮಚಂದ್ರಪ್ಪ, ಬೆಂಕಿ ಪುಟ–237.
4. ಬರಗೂರು ರಾಮಚಂದ್ರಪ್ಪ, ಒಂದು ಊರಿನ ಕತೆ. 161.
5. ಅದೇ ಪುಟ–107.
6. ಕಪ್ಪು, ಕುಂ, ವೀರಭದ್ರಪ್ಪ ಪುಟ. 39.
7. ಅದೇ ಪುಟ–70.
8. ಅದೇ ಪುಟ–13.
9. ಅದೇ ಪುಟ–127.
10. ಅದೇ ಪುಟ–127.
11. ಅದೇ ಪುಟ–129.
12. ಅದೇ ಪುಟ–140.
13. ಹುಲಿಗೆಮ್ಮ ಚೆನ್ನಣ್ಣ ವಾಲೀಕಾರ ಪುಟ–11.
14. ಅದೇ ಪುಟ–03.
15. ಅದೇ ಪುಟ–71.
16. ಅದೇ ಪುಟ–106.
17. ಮೂಳ್ಳೂರು ನಾಗರಾಜು, ಮರಣಮಂಡಲ ಮದ್ಯದೊಳಗೆ ಪುಟ–42.
18. ಮೂಳ್ಳೂರು ನಾಗರಾಜು, ಮರಣಮಂಡಲ ಮದ್ಯದೊಳಗೆ ಪುಟ–54.
19. ಮ.ನ. ಜವರಯ್ಯ ಮಾಗಿ, ಪುಟ–169.
20. ಬಸವರಾಜ ಸಬರದ ದಲಿತ ಬದುಕಿನ ಮೂರು ಮಹತ್ವ ದಾಖಲೆಗಳು ಪುಟ–66.